ಸೌಲಭ್ಯಗಳು ಅಗಣಿತ ಸಾಧ್ಯತೆಗಳೊಂದಿಗೆ ತಂದು ತುಂಬಿದ ರಾಶಿ ಸವಲತ್ತುಗಳು ಮನೆತುಂಬ ತುಂಬಿ ನಿಂತಿದ್ದವು. ಅಪೂರ್ವ, ಅನನ್ಯ ಮನರಂಜನೆಗಳು, ಅಂಗೈಯೊಳಗಿನ ಅನಂತ ಮಾಹಿತಿಯ ವಿಸ್ತಾರಕ್ಕಿಂತ ಒಂದು ಸಣ್ಣ ಜೀವಂತ ಸಹವಾಸಕ್ಕಾಗಿ ಮನಸ್ಸು ಹಸಿಯಾಗಿ ಹಂಬಲಿಸುತ್ತಿತ್ತು. ಯಾವಾಗಲೂ ಗಡಿಯಾರದ ಅಡಿಯಾಳಾಗಿ, ಅಂಕೆಸಂಖ್ಯೆಗಳೊಂದಿಗೆ ಗೋಜಲಾಗಿ, ಕೀಬೋರ್ಡುಗಳ, ಟಚ್ ಸ್ಕ್ರೀನ್‌ಗಳ ಸ್ಪರ್ಶಗಳಲ್ಲಿ ದಣಿದು ಶುಷ್ಕವಾಗಿ ಮರಗಟ್ಟಿದ ಮಾತೃತ್ವ! ಮನೆಗೆ ಬಂದಾಗ ನಿತ್ರಾಣವಾಗಿ ಕಂಪಿಸುವ ಕೈ ಬೆರಳುಗಳು. ಮಗಳ ಮೈದಡವಿ, ತಲೆಸವರಿ, ಮಡಿಲಿಗೆಳೆದು ಸಂತೈಸುವ ಚೈತನ್ಯ ಉಳಿಯುತ್ತಿರಲಿಲ್ಲ. ಇಂದಿನ ಚೂಡಿ, ಜೀನ್ಸ್, ಪ್ಯಾಂಟುಗಳಿಗೆಲ್ಲ ಮಡಿಲಾದರೂ ಎಲ್ಲಿದೆ? ಮಮತೆ ಅನ್ನುವುದು ಹೊರಬರುವ ದಾರಿ ಕಾಣದೆ ಒಳಗೇ ಆವಿಯಾಗುತ್ತಿತ್ತು. ಯಾವಾಗಲೂ ಅನ್ಯಾಯ, ಅಪರಾಧಗಳು, ಕೊಲೆ, ಸುಲಿಗೆ, ಅತ್ಯಾಚಾರಗಳು ರೂಪಿಸಿದ ವ್ಯಕ್ತಿಚಿತ್ರಗಳ ನಡುವೆ ದಿನದ ಬಹುಭಾಗ ಕಳೆಯಬೇಕಾದ ತಂದೆ, ಇದರಿಂದೆಲ್ಲ ಕಳಚಿಕೊಂಡು ತನಗೊಂದು ನ್ಯಾಯದ, ನೈರ್ಮಲ್ಯದ ಮುಖವಾಡ ಧರಿಸಿ ಬರಬೇಕಾದರೆ ತಡರಾತ್ರಿಯವರೆಗೂ ಕಾಯಬೇಕಿತ್ತು. ಮಗಳೆಂಬ ಸೆಳೆತವೆಷ್ಟಿದ್ದರೂ ಅವರವರ ವರ್ತುಲಗಳೊಳಗೆ ಸೇರಿರಬೇಕಾದ ಅನಿವಾರ್ಯದಲ್ಲಿ ಕ್ಷಮಾ ಎಂದೂ ಕೇಂದ್ರಬಿಂದುವಾಗಿ ಉಳಿಯುವ ಸಾಧ್ಯತೆ ಇರಲಿಲ್ಲ. ಮನೆಕೆಲಸಕ್ಕಾಗಿ ನೇಮಿಸಿದವರು ವರ್ಷ ವರ್ಷವೂ ಬದಲಾಗಿ ಮತ್ತೊಮ್ಮೆ ತಬ್ಬಲಿತನದ ತೆರೆಯೆಳೆದು ಹೋಗುತ್ತಿದ್ದರು. ಮಾನಸಿಕ ಬಂಧಗಳಿಗೆ, ಹೃದಯದ ಹಂಬಲಗಳಿಗೆ, ಸ್ನೇಹ, ಜಗಳ, ಮಮತೆ, ಮುನಿಸುಗಳಿಗೆ ಯಾವುದೇ ಪರಿಣಾಮವಿರಲಿಲ್ಲ. ವಿದ್ಯಾಭ್ಯಾಸ ಅನ್ನುವುದು ಅಯಾಚಿತ – ಅನಿವಾರ್ಯವಾಗಿ ಪ್ರತಿದಿನದ ಪ್ರಯಾಸವೆನಿಸಿತು. ಹೆತ್ತವರ ಒತ್ತಡ ಇನ್ಯಾರದೋ ಶಿಫಾರಸಿನೊಂದಿಗೆ ಲಲಿತೆಯ ಬಳಿ ಕಳಿಸಿತ್ತು.

ನಿವೃತ್ತಿ ಅಂದರೆ ದುಡಿಮೆಯಲ್ಲಿ ಬದಲಾವಣೆ ಅಂತ ಅಂದುಕೊಂಡೆವು. ವಿಶ್ರಾಂತಿ ಅಂದರೆ ಮುಂದೆ ಹೆಚ್ಚಿನ ಖಾಲಿತನವಿರುತ್ತದೆ. ಯಶಸ್ಸನ್ನು ಕಂಡವರು ಅಳೆಯುತ್ತಾರೆ. ಸಂತೃಪ್ತಿ ಮತ್ತು ಅದರ ದಾರಿಯನ್ನು ನಮಗೆ ನಾವೇ ಹುಡುಕಿ ಕಂಡುಕೊಳ್ಳಬೇಕು. ಬ್ಯಾಂಕಿನ ರೀಜನಲ್ ಮ್ಯಾನೇಜರ್ ಆಗಿ ರಿಟೈರಾದಾಗ ಅಷ್ಟು ವರ್ಷಗಳ ಅಂಕಿಸಂಖ್ಯೆಗಳ ನಡುವೆ ತೀರಾ ಒಣ ಮಾನವನಾಗಿದ್ದೆ. ಲಲಿತಾ ಅಂದರೆ ನಿರಂತರ ಲವಲವಿಕೆ. ಮಕ್ಕಳ ವಿಚಾರ ಒಂದು ಬಿಟ್ಟು ಇತರ ಎಲ್ಲ ಕೊರತೆಗಳನ್ನು ಕಡೆಗಣಿಸಿಯೇ ದಾಟಿಬಂದವಳು. ಮನೆಯೊಳಗೆ ಅಚ್ಚುಕಟ್ಟು. ಅಂಗಳದ ಸುತ್ತ ಬಹಳಷ್ಟು ವೈವಿಧ್ಯದಲ್ಲಿ ಸಸ್ಯಸಂಪತ್ತು. ತರಕಾರಿ ಗಿಡಗಳಲ್ಲದೆ ಹಿತ್ತಿಲಲ್ಲಿ ಮಕ್ಕಳಂತೆ ನಟ್ಟು ಬೆಳೆಸಿದ ತೆಂಗು, ಮಾವು, ಹಲಸು, ಹಲವು ಹಣ್ಣಿನ ಮರಗಳು. ದಶಕದ ಅವಧಿಯಲ್ಲಿ ಈಗೆಲ್ಲ ಬೆಳೆದು ಫಲ ನೀಡುವಂತಾಗಿವೆ. ನಮ್ಮ ಆಸೆಗಳ ಸಾಕಾರದಂತಿವೆ. ಕಂಡ ಕನಸುಗಳ ಸಾಕ್ಷಿಗಳಂತೆ ಕಾಣುತ್ತವೆ. ಮಕ್ಕಳಾದರೆ?... ಈಗಾಗಲೇ ದೊಡ್ಡವರಾಗಿ, ಬೇಕಾದಷ್ಟು ಓದಿಕೊಂಡು, ಉದ್ಯೋಗಕ್ಕಾಗಿ ಊರು ಬಿಟ್ಟು, ಉನ್ನತಿಗಾಗಿ ದೇಶವನ್ನೇ ಬಿಟ್ಟು ನಡೆದಿರುತ್ತಿದ್ದರು. ಈ ಗಿಡ ಮರಗಳು ಇಲ್ಲೇ ನಮಗಾಗಿ ಹೂ ಹಣ್ಣು ಹೊತ್ತು ಕಾಯುತ್ತವೆ. ಅವುಗಳ ಸಮೃದ್ಧಿಯಲ್ಲಿ ನಮಗೊಂದು ಸಮತೋಲನವಿರುತ್ತದೆ. ಅಕ್ಕ ಪಕ್ಕದವರಿಗೆ ಹಂಚಿದಾಗ ಸಿಗುವ ಸಣ್ಣ ಪುಟ್ಟ ಸಂತಸಗಳು ಇಲ್ಲಿ ಊರಿದ ಬೇರುಗಳಿಗೆ ಹನಿ ನೀರಾವರಿಯಂತೆ ಪರಿಣಮಿಸುತ್ತವೆ. ಒಂದು ಡಿಪಾರ್ಟ್‌ಮೆಂಟಲ್ ಸ್ಟೋರಲ್ಲಿ ಲೆಕ್ಕ ನೋಡುವ ಕೆಲಸವನ್ನು ಮುಜುಗರವಿಲ್ಲದೆ ಮಾಡುತ್ತಿದ್ದೆ. ಬೆಳಗು ಸಂಜೆಗೆ ಗಿಡಗಳ ಆರೈಕೆಯನ್ನು, ನೀರುಣಿಸುವ ಹಿತವನ್ನು ನಾನೇ ವಹಿಸಿಕೊಂಡಾಗ ಲಲಿತೆಗೆಷ್ಟೋ ನಿರಾಳವಾಯ್ತು, ನನಗೂ ಹಿಂಬಾಗಿಲ ಹರಿದ್ವಾರದ ದರ್ಶನವಾದಂತಾಯ್ತು.

ಹುಡುಗರ ಗುಂಪುಗಳಿಗೆಲ್ಲ ಕ್ಲಾಸುಗಳು ಮುಗಿದು ಹೊರಟು ಹೋದ ಮೇಲೆ ಕ್ಷಮಾ ಒಬ್ಬಳೇ ಮತ್ತೂ ಉಳಿದಿರುತ್ತಿದ್ದಳು. ಪಾಠ ಅನ್ನುವುದಕ್ಕಿಂತ ಹೆಚ್ಚಿನ ಮಾತು, ನಗು, ಉಲ್ಲಾಸಗಳು ಕಿಟಕಿ